ಒಂದು ವರ್ಷದಿಂದ ಕ್ರಿಕೆಟ್ ಪ್ರೇಮಿಗಳಿಗೆ ಪಂದ್ಯಗಳ ಭರಪೂರ ರಸದೌತಣ ಲಭಿಸುತ್ತಲೇ ಇದೆ. ಈಗ ಐಪಿಎಲ್ 18ನೇ ಆವೃತ್ತಿ ಆರಂಭಕ್ಕೆ ದಿನಗಣನೆ ಶುರುವಾಗಿದೆ.

2024ರಲ್ಲಿ ಐಪಿಎಲ್ ಮುಗಿದ ಕೆಲವೇ ದಿನಗಳಲ್ಲಿ ವೆಸ್ಟ್ ಇಂಡೀಸ್ ಹಾಗೂ ಅಮೆರಿಕದ ಸಹಯೋಗದಲ್ಲಿ ಟಿ–20 ವಿಶ್ವಕಪ್ ನಡೆದಿತ್ತು. ಭಾರತ ಚಾಂಪಿಯನ್ ಆಯಿತು. ಇದೇ ಮಾರ್ಚ್‌ನಲ್ಲಿ ಚಾಂಪಿಯನ್ಸ್ ಟ್ರೋಫಿಯಲ್ಲೂ ಭಾರತ ಚಾಂಪಿಯನ್ಸ್. ಈಗ ಭಾರತದಲ್ಲಿ ಮತ್ತೊಂದು ಕ್ರಿಕೆಟ್ ಕಾವು ಏರುತ್ತಿದೆ.

ಈ ಬಾರಿಯ ಐಪಿಎಲ್‌ನ ಉದ್ಘಾಟನಾ ಪಂದ್ಯ ಮಾರ್ಚ್ 22ರಂದು ಕೋಲ್ಕತ್ತದ ಈಡನ್ ಗಾರ್ಡನ್ ಮೈದಾನದಲ್ಲಿ ನಡೆಯಲಿದ್ದು, ಕೋಲ್ಕತ್ತ ನೈಟ್ ರೈಡರ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಣಾಹಣಿ ನಡೆಸಲಿವೆ.

## ಮತ್ತೊಂದು ಚುಟುಕು ಕ್ರಿಕೆಟ್ ಹಬ್ಬ 22ರಿಂದ

ಟೂರ್ನಿಯಲ್ಲಿ 'ಎ' ಗುಂಪಿನಲ್ಲಿ ಚೆನ್ನೈ ಸೂಪರ್ ಕಿಂಗ್ಸ್, ಕೋಲ್ಕತ್ತ ನೈಟ್ ರೈಡರ್ಸ್, ರಾಜಸ್ಥಾನ ರಾಯಲ್ಸ್, ಆರ್‌ಸಿಬಿ ಹಾಗೂ ಪಂಜಾಬ್ ಕಿಂಗ್ಸ್; 'ಬಿ' ಗುಂಪಿನಲ್ಲಿ ಮುಂಬೈ ಇಂಡಿಯನ್ಸ್, ಸನ್‌ರೈಸರ್ಸ್ ಹೈದರಾಬಾದ್, ಗುಜರಾತ್ ಟೈಟನ್ಸ್, ದೆಹಲಿ ಕ್ಯಾಪಿಟಲ್ಸ್ ಮತ್ತು ಲಖನೌ ಸೂಪರ್ ಜೈಂಟ್ಸ್ ತಂಡಗಳು ಇವೆ. ಮಾ. 22ರಿಂದ ಮೇ 25ರ ತನಕ ನಡೆಯುವ ಟೂರ್ನಿಯಲ್ಲಿ 74 ಪಂದ್ಯಗಳು ಜರುಗಲಿವೆ.

ಅಹಮದಾಬಾದ್, ಬೆಂಗಳೂರು, ಚೆನ್ನೈ, ದೆಹಲಿ, ಧರ್ಮಶಾಲಾ, ಕೋಲ್ಕತ್ತ, ಹೈದರಾಬಾದ್, ವಿಶಾಖಪಟ್ಟಣ, ಮುಂಬೈ, ಮುಲ್ಲಾನಪುರ, ಲಖನೌ, ಜೈಪುರ ಮತ್ತು ಗುವಾಹಟಿಯಲ್ಲಿ ಪಂದ್ಯಗಳು ನಿಗದಿಯಾಗಿವೆ.

ಟೂರ್ನಿಯ ನಿಯಮದ ಪ್ರಕಾರ ಪ್ರತಿ ತಂಡವೂ ತಮ್ಮ ಗುಂಪಿನಲ್ಲಿನ ತಂಡಗಳ ವಿರುದ್ಧ ಎರಡು ಬಾರಿ ಪಂದ್ಯಗಳನ್ನು ಆಡಲಿದೆ. ಒಟ್ಟು ಎರಡು ಗುಂಪುಗಳು ಇದ್ದು ಪ್ರತಿ ಗುಂಪಿನ ಅಂಕಪಟ್ಟಿಯಲ್ಲಿ ಮೊದಲ ನಾಲ್ಕು ಸ್ಥಾನ ಗಳಿಸುವ ತಂಡಗಳು ಪ್ಲೇ ಆಫ್‌ಗೆ ಅರ್ಹತೆ ಪಡೆಯಲಿವೆ. ಪ್ಲೇ ಆಫ್‌ನಲ್ಲಿ ಉತ್ತಮ ಪ್ರದರ್ಶನ ತೋರಿದ ಎರಡು ತಂಡಗಳು ಕ್ವಾಲಿಫೈಯರ್ ಪಂದ್ಯಗಳನ್ನು ಆಡಲಿವೆ. ಕ್ವಾಲಿಫೈಯರ್–1ರಲ್ಲಿ ಗೆಲುವು ಸಾಧಿಸುವವರು ನೇರವಾಗಿ ಫೈನಲ್‌ನಲ್ಲಿ ಆಡುವ ಅವಕಾಶ ಪಡೆಯುತ್ತಾರೆ. ಸೋತ ತಂಡ ಪ್ರಶಸ್ತಿ ಸುತ್ತಿಗೆ ಅರ್ಹತೆ ಪಡೆಯಲು ಕ್ವಾಲಿಫೈಯರ್–2 ಪಂದ್ಯದಲ್ಲಿ ಆಡಬೇಕಾಗುತ್ತದೆ.



ಕೆ.ಎಲ್. ರಾಹುಲ್: ಹೊಸ ತಂಡದೊಂದಿಗೆ ಭರವಸೆಯ ಅಧ್ಯಾಯ

ಇವರೆಲ್ಲರೂ ಹರಾಜಿನಲ್ಲಿ ಕೋಟ್ಯಂತರ ರೂಪಾಯಿ ಹಣ ಪಡೆದರೆ, ಈಗಾಗಲೇ ತಂಡಗಳಲ್ಲಿದ್ದ ಸನ್‌ರೈಸರ್ಸ್ ತಂಡದ ಹೆನ್ರಿಚ್ ಕ್ಲಾಸನ್ ₹23 ಕೋಟಿ, ಆರ್‌ಸಿಬಿಯ ವಿರಾಟ್ ಕೊಹ್ಲಿ ₹21 ಕೋಟಿ, ಲಖನೌ ಸೂಪರ್ ಜೈಂಟ್ಸ್ ನಿಕೋಲಸ್ ಪೂರನ್ ₹21 ಕೋಟಿ, ಹೈದರಾಬಾದ್ ತಂಡ ಪ್ಯಾಟ್ ಕಮಿನ್ಸ್, ರಾಜಸ್ಥಾನ ತಂಡದ ಸಂಜು ಸ್ಯಾಮ್ಸನ್, ಯಶಸ್ವಿ ಜೈಸ್ವಾಲ್, ಗುಜರಾತ್ ಟೈಟನ್ಸ್ ರಶೀದ್ ಖಾನ್, ಮುಂಬೈ ಇಂಡಿಯನ್ಸ್ ಜಸ್‌ಪ್ರೀತ್ ಬೂಮ್ರಾ, ಚೆನ್ನೈ ತಂಡದಲ್ಲಿ ಋತುರಾಜ ಗಾಯಕವಾಡ್ ಅವರಿಗೆ ತಲಾ ₹18 ಕೋಟಿ ನೀಡಿ ಫ್ರಾಂಚೈಸ್‌ಗಳು ಉಳಿಸಿಕೊಂಡಿವೆ.

ಈ ಸಲದ ಐಪಿಎಲ್‌ನಲ್ಲಿ ಕರ್ನಾಟಕದ ಕೆ.ಎಲ್. ರಾಹುಲ್ (ಡೆಲ್ಲಿ ಕ್ಯಾಪಿಟಲ್ಸ್), ಪ್ರಸಿದ್ಧ್ ಕೃಷ್ಣ (ಗುಜರಾತ್ ಟೈಟನ್ಸ್), ವೈಶಾಕ್ ವಿಜಯಕುಮಾರ್ (ಪಂಜಾಬ್ ಕಿಂಗ್ಸ್), ಕರುಣ್ ನಾಯರ್ (ಡೆಲ್ಲಿ ಕ್ಯಾಪಿಟಲ್ಸ್), ಶ್ರೀಜಿತ್ ಕೃಷ್ಣನ್ (ಮುಂಬೈ ಇಂಡಿಯನ್ಸ್), ಶ್ರೇಯಸ್ ಗೋಪಾಲ್ (ಚೆನ್ನೈ ಸೂಪರ್ ಕಿಂಗ್ಸ್), ಮನೀಷ್ ಪಾಂಡೆ (ಕೋಲ್ಕತ್ತ ನೈಟ್ ರೈಡರ್ಸ್), ಲವ್‌ನೀತ್ ಸಿಸೋಡಿಯಾ (ರೈಡರ್ಸ್), ದೇವದತ್ ಪಡಿಕ್ಕಲ್ (ಆರ್‌ಸಿಬಿ), ಮನೋಜ್ ಭಾಂಡಗೆ (ಆರ್‌ಸಿಬಿ), ಅಭಿನವ್ ಮನೋಹರ್ (ಸನ್‌ರೈಸರ್ಸ್ ಹೈದರಾಬಾದ್), ಮನ್ವಂತ್ ಕುಮಾರ್ (ಡೆಲ್ಲಿ) ಮತ್ತು ಪ್ರವೀಣ್ ದುಬೆ (ಪಂಜಾಬ್ ಕಿಂಗ್ಸ್) ತಂಡಗಳಲ್ಲಿ ಸ್ಥಾನ ಗಳಿಸಿದ್ದಾರೆ. ಇವರ ಪ್ರದರ್ಶನದ ಮೇಲೂ ರಾಜ್ಯದ ಕ್ರಿಕೆಟ್ ಪ್ರೇಮಿಗಳ ಕಣ್ಣು ನೆಟ್ಟಿದೆ.

ಈ ಬಾರಿಯ ಐಪಿಎಲ್ ಪಂದ್ಯಾವಳಿ ಮಾರ್ಚ್ 22ರಿಂದ ಮೇ 25ರವರೆಗೆ ನಡೆಯಲಿದೆ. ಒಂದೆಡೆ ಏರುತ್ತಿರುವ ಬಿಸಿಲು. ಇನ್ನೊಂದೆಡೆ ಕ್ರಿಕೆಟ್ ಜ್ವರ. ಒಂದು ಅಸಹನೀಯ. ಇನ್ನೊಂದು ಹಿತಕರ.

ಪ್ರತಿಕ್ರಿಯಿಸಿ: feedback@sudha.co.in